ನಾನು ನೀರಾವರಿ ಸಚಿವರಲ್ಲಿ ಕೇಳುತ್ತೇನೆ. ಅದರ ಜೊತೆಗೆ main canal ಹಾಗೂ distributor ಗಳನ್ನು ಸಂಪೂರ್ಣವಾಗಿ re-modeling ಕಾರ್ಯಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆನ್ನುವಂಥ ಒಂದು ಮನವಿಯನ್ನು ತಮ್ಮ ಮುಖಾಂತರ ಅವರಿಗೆ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಗದೀಶ್ ವಿರೂಪಾಕ್ಷಪ್ಪ ಮೆಟಗುಡ್:-ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಹೆಚ್ಚು ಹೂಳು ತುಂಬಿರುವುದರಿಂದ ಕೇವಲ 15 ರಿಂದ 20 ಟಿ.ಎಂ.ಸಿ. ನೀರು ಮಾತ್ರ ಸಂಗ್ರಹವಾಗುತ್ತಿದೆ. ಅದಲ್ಲದೇ ಈಗಾಗಲೇ ಅಲ್ಲಿ ನಾಲ್ಕು ಸಲ ಶುದ್ಧಿ ಮಾಡಿ ನೀರನ್ನು ಕುಡಿಯುವಂಥ ಕೆಲಸವನ್ನು ಮಾಡುತ್ತಾರೆ. ಅಲ್ಲಿ ನೀರಿನಲ್ಲಿ ವೇಸ್ಟ್ ಎಷ್ಟಿದೆ ಎಂಬ ಬಗ್ಗೆ ಯಾರೂ ಕೂಡ ವಿಚಾರ ಮಾಡುತ್ತಿಲ್ಲ. ಅದರ ಬಗ್ಗೆ ಪರಿಶೀಲನೆ ಮಾಡಿ ನೀರು ಕುಡಿಯುವ ಬಗ್ಗೆ ವಿಚಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿರುವುದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ. ಆದರೆ ಅದಕ್ಕೂ ಮೊದಲು ಅವರು ಹೇಳಿದ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಏಕೆಂದರೆ ಈ ಗಮನ ಸೆಳೆಯುವ ಸೂಚನೆ ಏನಿದೆ ಅದರೊಳಗೆ ಈ ಪ್ರಶ್ನೆ ಬರುವುದಿಲ್ಲ.

(ಆ) ವಿಷಯ:- <u>ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ನ್ಯಾಯಾಂಗ ತನಿಖೆ</u> :

ಶ್ರೀ ಸಿ.ಎಸ್. ನಾಡಗೌಡ (ಶ್ರೀ ವಸಾಲೀಕಯ್ಯ ಗುತ್ತೇದಾರ್ ಪರವಾಗಿ) :-ಮಾನ್ಯ ಉಪಾಧ್ಯಕ್ಷರೆ, ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ಸದರಿ ಪ್ರಕರಣವನ್ನು ನ್ಯಾಯಾಂಗ ತನಿಖೆ ನಡೆಸುವಂತೆ ವಸತಿ ಮತ್ತು ಮುಜರಾಯಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ॥ ಎ.ಎಸ್. ಆಜಾಂರ್ಜ(ಗೃಹ ಸಚಿವರು)(ವಸತಿ ಮತ್ತು ಮುಜರಾಯಿ ಸಚಿವರ ಪರವಾಗಿ):-

ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಭಾಗ್ಯವಂತಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವ ಸತ್ಯಾಸತ್ಯತೆಯನ್ನು ತಿಳಿಯಲು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ಸದರಿ ಹಗರಣವನ್ನು ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ :

ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನವು ಸಮೂಹ ಎ ವರ್ಗದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ದೇವಸ್ಥಾನಕ್ಕೆ ಸಹಾಯಕ ಆಯುಕ್ತರು ಗುಲ್ಬರ್ಗಾ ವಿಭಾಗ ಇವರು ಆಡಳಿತಾಧಿಕಾರಿಯಾಗಿದ್ದಾರೆ.

ಸದರಿ ದೇವಾಲಯದಲ್ಲಿ ಚಿನ್ನಾಭರಣಗಳ ದುರುಪಯೋಗವಾಗಿದೆ ಎಂಬ ಆಪಾದನೆಗಳು ಮಾಧ್ಯಮಗಳಲ್ಲಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ದಿನಾಂಕ : 27-03-2008 ರಂದು ಸಾರ್ವಜನಿಕರ ಸಮ್ಮುಖದಲ್ಲಿ ಸರ್ಕಾರ ಖಜಾನೆಯಲ್ಲಿದ್ದ ಚಿನ್ನಾಭರಣಗಳನ್ನು ತೂಕ ಮಾಡಲು ಪ್ರಕಟಣೆ ಹೊರಡಿಸಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಿ ಅದರನ್ವಯ ಖಜಾನೆಯಲ್ಲಿದ್ದ ಚಿನ್ನ, ಬೆಳ್ಳಿ ಆಭರಣಗಳನ್ನು ತೆಗೆದು ತಹಸೀಲ್ದಾರ್ ಕಛೇರಿ, ಅಫಜಲಪೂರ ಇಲ್ಲಿ ಉಪಸ್ಥಿತರಿದ್ದ, ಸಾರ್ವಜನಿಕರ ಸಮ್ಮುಖದಲ್ಲಿ ಚಿನ್ನಾಭರಣಗಳನ್ನು ತೂಕ ಮಾಡಲಾಗಿದೆ.

ಸದರಿ ಮೇಲ್ಕಂಡ ಆಭರಣಗಳನ್ನು ತೂಕ ಮಾಡಿದ ನಂತರ ಸಾರ್ವಜನಿಕರ ಸಮ್ಮುಖದಲ್ಲಿ ತಾಲ್ಲೂಕು ಟ್ರೆಜರಿಯಲ್ಲಿ ಮರಳಿ ಇಡಲಾಗಿದೆ. ಶ್ರೀ ಮಹಾದೇವಯ್ಯ ಇವರು ದಿನಾಂಕ 09-1991 ರಿಂದ 26-01-2007ರವರೆಗೆ ದೇವಸ್ಥಾನದ ಕಾರ್ಯದರ್ಶಿಯೆಂದು ಕೆಲಸ ನಿರ್ವಹಿಸಿದ್ದು, ಸದರಿಯವರು ದೇವಸ್ಥಾನದ ಲೆಕ್ಕಪತ್ರಗಳನ್ನು ಹಾಗೂ ಕಛೇರಿ ದಾಖಲೆಗಳನ್ನು ಕೊಡದೆ ಇರುವುದರಿಂದ ಅಂತಹ ದಾಖಲೆಗಳ ಅನುಗುಣವಾಗಿ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕ ಪರಿಶೋಧನಾ ವಲಯ, ಗುಲಬರ್ಗಾ ಇವರು ಸದರಿ ದೇವಸ್ಥಾನದ 2002-03 ರಿಂದ 2006-07 ರ ಲೆಕ್ಕ ತಪಾಸಣೆ ಮಾಡಿರುತ್ತಾರೆ. ಪ್ರಕರಣದ ಬೆಳವಣಿಗೆಯ ಹಿನ್ನೆಲೆಯಲ್ಲಿ, 2002-03 ರಿಂದ ಇಲ್ಲಿಯವರೆಗೆ ಚಿನ್ನ ಬೆಳ್ಳಿ ಆಭರಣಗಳ ಮತ್ತು ವಿಶೇಷ ಲೆಕ್ಕ ತಪಾಸಣೆಯನ್ನು ಕೈಗೊಂಡು ವರದಿಯನ್ನು ಸ್ಲಿಸಲು ಸಹಾಯಕ ನಿಯಂತ್ರಕರನ್ನು

ಕೋರಲಾಗಿದೆ. ಸದರಿಯವರು ದೇವಸ್ಥಾನದ ಲೆಕ್ಕಪತ್ರಗಳನ್ನು ಹಾಗೂ ಕಛೇರಿ ದಾಖಲೆ ವಹಿಸಿಕೊಡದೆ ಇರುವುದರಿಂದ ಸದರಿಯವರ ವಿರುದ್ಧ ಐ.ಪಿ.ಸಿ. 172 ಮತ್ತು 175 ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು, ಆರಕ್ಷಕ ಉಪ ನಿರೀಕ್ಷಕರು ಪೊಲೀಸ್ ಠಾಣೆ ಅಫಜಲಪೂರ ಇವರಿಗೆ ತಿಳಿಸಲಾಗಿದೆ. ಕಂದಾಯ ಇಲಾಖೆಯಲ್ಲಿ, ಸದರಿಯವರು ಫತ್ತರಗಾ ಗ್ರಾಮದ ಗ್ರಾಮಲೆಕ್ಕಿಗರೆಂದು ಕಾರ್ಯನಿರ್ವಹಣಾ ಅವಧಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಕೈಗೊಂಡು ನಾಲ್ಕು ಆರೋಪಗಳು ರುಜುವಾತ ಸದರಿ ವರದಿಯಂತೆ ಆಪಾದಿತ ನೌಕರರು ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯಲಾಗಿದೆ.

ಅಲ್ಲದೆ, ಈ ವಿಷಯದಲ್ಲಿ ಶ್ರೀ ಸಿದ್ಧನಗೌಡ ಮತ್ತಿತರರು ಮಾನ್ಯ ಉಚ್ಚನ್ಯಾಯಾಲಯ ಸಾರ್ವಜನಿಕ ಹಿತಾಸಕ್ತಿಯ ರಿಟ್ ಪಿಟೆಷನ್ ನಂ: 12883/ 2008 (ಪಿಐಎಲ್) ಅನ್ನು ಸಲ್ಲಿಸಿ ಭಾಗ್ಯವಂತಿ ದೇವಸ್ಥಾನದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ತನಿಖೆಗಾಗಿ ಒಬ ಕಮೀಷನರ್ ನೇಮಿಸುವಂತೆ ಹಾಗೂ ಲೆಕ್ಕ ತಪಾಸಣೆಯನ್ನು ಹೊಸದಾಗಿ ನಡೆಸುವಂತೆ ಕೋರಿದ್ದಾರೆ. ಸದರಿ ಅರ್ಜಿಗೆ ಸೂಕ್ತ ಮಾಹಿತಿಯನ್ನು ಸರ್ಕಾರಿ ವಕೀಲರಿಗೆ ಕಳುಹಿಸಲಾಗಿದೆ.

ಈ ವಿಚಾರವು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಒಳಗೊಂಡಿದ್ದು, ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಮಾನ್ಯ ಉಚ್ಚನ್ಯಾಯಾಲಯದ ಆದೇಶ ನಿರೀಕ್ಷೆ ಆದುದರಿಂದ ಈ ವಿಚಾರವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವ ಪ್ರಶ್ನೆ ಬರುವುದಿಲ್ಲ.

Public Interest Litigation ಹೈಕೋರ್ಟ್‌ನ ಮುಂದಿದೆ. ಆದ್ದರಿಂದ ಮತ್ತೊಮ್ಮೆ ನ್ಯಾಯಾಂಗ ತನಿಖೆ ಮಾಡುವುದು ಅಗತ್ಯವಿಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಅವನು ಅಲ್ಲಿದ್ದಂಥ ಉನ್ನತ ಇಲಾಖೆಯವರನ್ನು ಕರೆತಂದು ಡಿ.ಸಿ. ಆಫೀಸ್‌ನವರ ಅನುಮತಿ ತೆಗೆದುಕೊಂಡೆಯೇ ಎಲ್ಲವನ್ನು ತೆಗೆದು ಸಾರ್ವಜನಿಕ ಸಮ್ಮುಖದಲ್ಲೆ ತೂಕಮಾಡಿದರು ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಆದರೆ, ಮೊದಲೇ ಇವನ್ನು ಕದ್ದು ತೆಗೆದುಕೊಂಡು ಅದನ್ನು ಕರಗಿಸಿದ್ದಾನೆ ಎಂಬ ಆರೋಪ ಇದೆ. ಇದು ಕೇವಲ ಒಂದು ದೇವಸ್ಥಾನದಲ್ಲಿ ನಡೆಯುತ್ತಿಲ್ಲ, ಸಾಮಾನ್ಯವಾಗಿ ಎಲ್ಲಾ ದೇವಸ್ಥಾನಗಳಲ್ಲಿಯು ಇದು ನಡೆಯುತ್ತಿದೆ. ಆದರೆ, ಇದು ಒಂದು ಉದಾಹರಣೆ ಮಾತ್ರ. ಕೀಗಳು ಡೆಪ್ಯೂಟಿ ಕಮಿಷನರ್

ಆಫೀಸ್‌ನಲ್ಲಿ ಮತ್ತು ಸಂಬಂಧಪಟ್ಟ ಎಂಡೋಮೆಂಟ್‌ನವರು ನೋಡಿಕೊಳ್ಳುತ್ತಿದ್ದರೆ ಅವರು ಬಂದು ಅವರ ಸಮಕ್ಷಮ ಮ್ಯಾನೇಜ್‌ಮೆಂಟ್ ಕಮಿಟಿಯಾಗಲಿ ಅಥವಾ ಯಾರು in charge ಇರುತ್ತಾರೆ ಅವರು ಮೊದಲೆ ಸಾರ್ವಜನಿಕ ಪ್ರಕಟಣೆ ಮಾಡಿ, ಪ್ರಕಟಣೆ ಎಂದೆರೆ ಹೇಗೆ ಮಾಡುತ್ತಾರೆ? ತಾವು ಗೃಹ ಇಲಾಖೆಯನ್ನು ನಿರ್ವಹಿಸುವ ಮಂತ್ರಿಗಳಾಗಿದ್ದೀರಿ. ತಮಗೆ ಗೊತ್ತಿದೆ ಲೋಕಲ್ ಯಾವುದಾದರು ಒಂದು ಪತ್ರಿಕೆಯಲ್ಲಿ ನಾಳೆ ದಿವಸ ಪ್ರಿಂಟ್ ಮಾಡಿ ಹಿಂದಿನ ದಿನಾಂಕವನ್ನು ಹಾಕಿ ತಂದು ಕೊಡುತ್ತಾರೆ. ಇಂಥ ಘಟನೆಯಾಗಿದೆಯೆಂದ ತಕ್ಷಣವೆ ಲೋಕಲ್ ಪೆಸ್‌ರವರನ್ನು ಹಿಡಿಯುತ್ತಾರೆ. Whether this has come in a bigger circulation paper. ಇದು ಪ್ರಶ್ನೆ. ಅದು ಆ ರೀತಿ ಬಂದಿಲ್ಲ. ಯಾವುದೊ ಲೋಕಲ್ ಪತ್ರಿಕೆಯನ್ನು ಬಳಸಿಕೊಂಡು ಇದನ್ನೆಲ್ಲ ಮುಚ್ಚಿಹಾಕತಕ್ಕ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ ನ್ಯಾಯಾಂಗ ತನಿಖೆಯನ್ನು ಮಾಡಿ ಎಂದು ಹೇಳುತ್ತಿದ್ದೇವೆ. ಅಥವಾ ಸಿ.ಓ.ಡಿ.ಯವರಿಗೆ ವಹಿಸಬೇಕೆಂದು ಹೇಳುತ್ತೇವೆ. ದೇವರ ಹಣದಲ್ಲಿ ಸಹ ಅವ್ಯವಹಾರ ನಡೆಯತಕ್ಕದ್ದು ಯಾರಿಗೂ ಶ್ರೇಯಸ್ ಅಲ್ಲ. ಆದ್ದರಿಂದ ತಾವು ಇನ್ನು ಸ್ವಲ್ಪ ಮುಂದೆ ಹೋಗಿ ಇದರ ಮೇಲೆ ಸೂಕ್ತ ಕ್ರಮ ಜರುಗಿಸಲು ಆದೇಶ ಮಾಡಬೇಕು.

ಡಾ॥ ವಿ.ಎಸ್. ಆಚಾರ್ಯ :- ಯಾವುದೇ ಒಂದು ನೋಂದಾಯಿತ ಮುಜರಾಯಿ ದೇವಸ್ಥಾನದಲ್ಲಿ ಚಿನ್ನದ ಆಭರಣವನ್ನು ರೂಪಾಂತರ ಮಾಡಿ ಬೇರೆ ಆಭರಣವನ್ನು ಮಾಡಬೇಕು, out dated, ಸಣ್ಣಪುಟ್ಟದ್ದು, ತುಂಡಾದದ್ದು, ಬಿಡಿಬಿಡಿ ಚಿನ್ನ ಇದ್ದರೆ ಅದನ್ನು ಕರಗಿಸಿ ಮಾಡಬೇಕೆಂದರೆ ಅದಕ್ಕೆ ಒಂದು ನಿಯಮ ಇದೆ. Assistant Commissionerರವರು ಇಂತಿಷ್ಟು ಮೌಲ್ಯದವರೆಗೆ ಅದಕ್ಕಿಂತ ಹೆಚ್ಚಿನ ಬಂಗಾರ ಬೆಳ್ಳಿ ಇದ್ದರೆ ಡೆಪ್ಯೂಟಿ ಕಮಿಷನರ್‌ರವರ ಅನುಮತಿಯನ್ನು ತೆಗೆದುಕೊಂಡು ಆ ದೇವಸ್ಥಾನದಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ಅದನ್ನು ಕರಗಿಸ ಬೇಕಾಗುತ್ತದೆ. ಅದಕ್ಕೆ ದಾಖಲೆಗಳು Assistant Commissioner, ಡಿ.ಸಿ.ಅಥವಾ ಆ ದೇವಸ್ಥಾನದಲ್ಲಿ ಇರಬೇಕಾಗುತ್ತದೆ. ಇದನ್ನು ಗುಟ್ಟಿನಲ್ಲಿ ಮಾಡುವ ವಿಚಾರವಾಗುವುದಿಲ್ಲ. ಈ ರೀತಿ ಅಲ್ಲಿ ಎಷ್ಟು ಚಿನ್ನ ಆ ದೇವಸ್ಥಾನದಲ್ಲಿದೆಯೆಂದು ಪ್ರಾಪರ್ಟಿ ರಿಜಿಸ್ಟರ್‌ನಲ್ಲಿದೆ. ಅದರಂತೆ ತಹಶೀಲ್ದಾರರ ಸಮ್ಮುಖದಲ್ಲಿ ಪಬ್ಲಿಕ್ ಪೇಪರ್‌ನಲ್ಲಿ ಜಾಹೀರಾತು ಮಾಡಿ ಎಲ್ಲರ ಸಮ್ಮುಖದಲ್ಲಿ ತೋರಿಸಿರುವಂಥದ್ದು ಈಗಲೂ ಟ್ರೆಝರಿಯಲ್ಲಿರುವಂಥದ್ದು, ಬಂಗಾರದ ಒಡವೆಗಳು 2 ಕೆ.ಜಿ. 434 ಗ್ರಾಮ್ 89 ಮಿಲಿಗ್ರಾಮ್. ಬಂಗಾರ ಮಿಶ್ರಿತ ಒಡವೆಗಳು 1 ಕೇ.ಜಿ. 16 ಗ್ರಾಮ್ 40

ಮಿಲಿಗ್ರಾಮ್. ಇದೇ ರೀತಿ ಬೆಳ್ಳಿ, ಅರಗ, ತಾಮ್ರ ಮತ್ತು ಯಾವ ಮೆಟಲ್ ಎಂದು ಗೊತ್ತಾಗದಿರುವುದು 73 ಗ್ರಾಮ್ ಎಂದು ರಿಜಿಸ್ಟರ್‌ನಲ್ಲಿರುವುದು ಅಷ್ಟೂ ಇದೆಯೆಂದು ಹೇಳಿದ್ದಾರೆ. ಅಲ್ಲಿ ಏನೂ ಆಗಿಲ್ಲವೆ ಎಂಬುದಕ್ಕ ಅಲ್ಲಿನ ಆಡಳಿತದವರು ಕೆಲವೊಂದ ಲೆಕ್ಕಪತ್ರವನ್ನು ಕೊಡಲಿಲ್ಲ, ದಾಖಲೆಗಳನ್ನು ಕೊಡಲಿಲ್ಲ ಎನ್ನುವಂಥದ್ದನ್ನು ಈಗಾಗಲೆ ನಾನು ಉತ್ತರದಲ್ಲಿ ಕೊಟ್ಟಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಂಡು ಒಂದು ಇನ್‌ಕ್ರಿಮೆಂಟ್ ಕಟ್ ಮಾಡುವ ನಿರ್ಣಯವನ್ನು ಆಗಿನ ಮೇಲಾಧಿಕರಿಗಳು ಅವರ ವಿವೇಚನೆಗೆ ಒಳಪಟ್ಟು ಮಾಡಿದ್ದಾರೆ. ಇದರ ಬಗ್ಗೆ ಪಿ.ಎ.ಎಲ್. ಹೈಕೋರ್ಟ್‌ನಲ್ಲಿ ಬಾಕಿ ಇದೆ. ಆ ಪಿ.ಎ.ಇಲ್.ನ outcome ಏನು ಎಂಬುದನು ನೋಡಿಕೊಂಡು ಮುಂದಿನ ಕ್ರಮಕೈಗೊಳ್ಳಬಹುದು. ಆ ದೃಷ್ಟಿಯಿಂದ ನೀವು ಈಗ ಮೇಲುನೋಟಕ್ಕೆ ಏನು ಹೇಳಿದ್ದೀರಿ ಅಂಥದ್ದು ಬಂಗಾರದ ಒಡವೆ, ಬೆಳ್ಳಿಯ ಆಭರಣದಲ್ಲಿ ವ್ಯತ್ಯಾಸವೇನು ಕಂಡುಬರುವುದಿಲ. ಅದು ಸರ್ಕಾರದ ಸಬ್‌ಟ್ರಝರಿಯಲ್ಲಿದೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಇಲ್ಲಿ ಮೂಲ ಪ್ರಶ್ನೆಗೆ ಉತ್ತರವೇ ಬರಲಿಲ್ಲ.

ಅಧ್ಯಕ್ಷರು :- ನಾನು ಇದರ ಬಗ್ಗೆ ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ನಾಡಗೌಡರೆ ಇದನ್ನು ಬಹಳ ಎಳೆದುಕೊಂಡು ಹೋಗಬೇಡಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಒಂದೇ ಒಂದು. 2004 ರಿಂದ 2007ರವರೆಗೆ ಅಲ್ಲಿ ಅಡಿಟ್ ಆಗಿಲ್ಲ. ಇದನ್ನಾದರು ತಾವು ಒಪ್ಪುತ್ತಿರಾ? ಮೂರು ವರ್ಷಗಳಿಂದ ಕಾಗದಪತ್ರ produce ಆಗಿಲ್ಲ ಏನೇನು ಆಗಿಲ್ಲ. ಅದು ಬಹಳ ದೊಡ್ಡ ದೇವಸ್ಥಾನ.

ಡಾ॥ ವಿ.ಎಸ್. ಆಚಾರ್ಯ :- ಆಡಿಟ್ ಮಾತ್ರ ಆಗಿಲ್ಲ ಎಂದ ಕೂಡಲೆ, ಅದರ ಲೆಕ್ಕಪತ್ರ .ಸರಿಯಾಗಿತ್ತು. ಲೆಕ್ಕಪತ್ರದ ತಪಾಸಣೆ ಮಾತ್ರ ಆಗಿಲ್ಲದಿದ್ದರೆ gravity of the offence ಕಾಲಕಾಲಕ್ಕೆ ಆಡಿಟ್ ಮಾಡಿಸಲಿಲ್ಲ ಎಂಬುದು ಮಾತ್ರ ಇದೆ. ಲೆಕ್ಕಪತ್ರ ಸರಿಯಿದ್ದರೆ ಇಲ್ಲವು ಸರಿಯುಂಟು ಎಂದು. ಒಂದು ಕಟ್ಟಡದ ಲೈಸೆನ್ಸ್ ತೆಗೆದುಕೊಳ್ಳದೆ ಕಟ್ಟಡವನ್ನು ಕಟ್ಟುತ್ತಾನೆಂದರೆ ಅದು ಅಫೆನ್ಸ್. ಅದಕ್ಕೆ ಎಷ್ಟೋ ಪೆನಾಲಿಟಿಯನ್ನು ಕೊಡಬೇಕು. ಆದರೆ, ಅದು ಒಂದು grave offence ಆಗುವುದಿಲ್ಲ. If he has constructed the building as per the building law prevailing in that area,

ಅಂದರೆ ಬೈಲಾ ಪ್ರಕಾರ ಕಟ್ಟಡವನ್ನು ಕಟ್ಟಿದ್ದರೆ ಲೈಸೆನ್ಸ್ ತೆಗೆದುಕೊಳ್ಳದಿದ್ದರು no objection. ಆ ರೀತಿ ಇದು. ಆದ್ದರಿಂದ ಇದು ಬಹಳ heinous crime ಆಗುವುದಿಲ್ಲ. ಅವನು ತಪ್ಪುಮಾಡಿದ್ದಾನೆಂದು ಅವನಿಗೆ ಶಿಕ್ಷೆಯನ್ನು ಸಹ ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :- ನನಗೆ ಈಗ ಒಂದು ಮಾಹಿತಿ ಬಂದಿದೆ. ಗೃಹ ಸಚಿವರು ಸಹ ಇಲ್ಲೆ ಇದ್ದಾರೆ. ಸಿರಾದಲ್ಲಿ ದೊಡ್ಡ ಗಲಾಟೆಯಾಗಿ ಅಲ್ಪಸಂಖ್ಯಾತರ ಹತ್ತಾರು ಅಂಗಡಿಗಳಿಗೆ ಬೆಂಕಿ ಹಾಕಿ ಲೂಟಿ ಮಾಡಿ ಕಲ್ಲು ತೂರಾಟ ಮಾಡಿದ್ದಾರೆ ಎನ್ನತಕ್ಕ ಮಾಹಿತಿ ಬಂದಿದೆ. ನನಗಿರುವ ಮಾಹಿತಿಯಲ್ಲಿ subject to verification ಹಿಂದೂ ವಿರಾಟ್ ಸಭೆಯ ಒಂದು ಮೆರವಣಿಗೆ ಇವತ್ತು ಶುಕ್ರವಾರ ದಿವಸವೇ ಮೈನ್ ರೋಡ್‌ನ ಮೇಲೆ ತೆಗೆದುಕೊಂಡು ಹೋಗುವಾಗ ಯಾರೋ ಕಿಡಿಗೇಡಿಗಳು ಕಲ್ಲು ಹೊಡೆದರೆಂದು ಅಪಪ್ರಚಾರ ಮಾಡಿ ಎಲ್ಲಾ ಕಡೆ ಬೆಂಕಿಹಚ್ಚತಕ್ಕದ್ದು ಸುಡತಕ್ಕದ್ದು ನಡೆದಿದೆ. ದೊಡ್ಡ ಗಲಾಟೆ ನಡೆದಿದೆ. ರಾತ್ರಿ ಸಹ ಸನಾಹುತವಾಗುವ ಸಾಧ್ಯತೆ ಇದೆ. ಅದಕ್ಕಾಗಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಹೇಗೆ? ಅಲ್ಲಿನ ಸ್ಥಿತಿ ಹೇಗಿದೆ? ಏನು ನಷ್ಟವಾಗಿದೆ? ವಾತಾವರಣ ಶಾಂತಿಯಾಗಿದೆಯೇ? ಗಂಬೀರವಾಗಿದೆಯೇ? ಎಂಬುದನ್ನು ಹೇಳಬೇಕು. ನನಗೆ ಬಂದ ಮಾಹಿತಿ ಪ್ರಕಾರ ಅಲ್ಲಿ tension ಇದೆ. ಸಾಕಷ್ಟು ಗಲಾಟೆ ನಡೆದಿದೆಯೆಂದು ತಿಳಿದುಬಂದಿದೆ. ಆದ್ದರಿಂದ ನಮ್ಮ ಉಪನಾಯಕರಾದ ಜಯಚಂದ್ರರವರನ್ನು ಬಸ್‌ನ ಮೂಲಕ ಕಳುಹಿಸಿದ್ದೇನೆ. ಅವರು ಸ್ಥಳಕ್ಕೆ ಧಾವಿಸಿದ್ದಾರೆ. ಅವರ ಮತಕ್ಷೇತ್ರವೇ ಅದು. ಆದ್ದರಿಂದ ಅಲ್ಲಿಯ ಸ್ಥಿತಿಗತಿಗಳ ಬಗ್ಗೆ ಸದನಕ್ಕೆ ದಯಮಾಡಿ ತಿಳಿಸಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.]

ಶ್ರೀ ಸಿ.ಬಿ. ಸುರೇಶ್‌ಬಾಬು (ಚಿಕ್ಕನಾಯಕನಹಳ್ಳಿ) :- ಮಾನ್ಯ ಅಧ್ಯಕ್ಷರೆ, ಇಂದು ಸಂಜೆ 4 - 4.30 ಗಂಟೆಯ ಸಮಯದಲ್ಲಿ ಸಿರಾದಲ್ಲಿ ಹಿಂದೂ ಸಮಾವೇಶದ ಮೆರವಣಿಗೆ ಹೋಗುವಂಥ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿಕ ರೀತಿಯಲ್ಲಿ, ಸಿರಾ ಪಟ್ಟಣದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಿಂದೂ ಮುಸ್ಲಿಂನವರು ಇರುವುದರಿಂದ ಅದು ಸೂಕ್ಷ್ಮವಾಗಿರತಕ್ಕ ಸ್ಥಳ ಅದಾಗಿದೆ. ಅಲ್ಲಿ ಇವತ್ತು ಶುಕ್ರವಾರ ಮೆರವಣಿಗೆ ಮಾಡುತ್ತಿದ್ದ ಸಂದರ್ಭದಲ್ಲಿ ಮುಸ್ಲಿಂ ಏರಿಯಾದಲ್ಲಿ ಹೋದಾಗ ಸ್ವಲ್ಪ ಗಲಭೆಯಾಗಿರತಕ್ಕದ್ದು ತಿಳಿದುಬಂದಿದೆ. ಅಲ್ಲಿ ಪೊಲೀಸ್ ಇಲಾಖೆಯವರಿಂದ ಪೈಫಲ್ಯದಿಂದಾಗಿ ಇಷ್ಟು ಆಗಿದೆಯೆಂದು ನಾನು ಭಾವಿಸುತ್ತೇನೆ. ಇಂಥ ಸೂಕ್ಷ್ಮ ವಿಚಾರದಲ್ಲಿ ಎಲ್ಲರು ಅಲರ್ಟ್ ಆಗಿರಬೇಕು. ನಮ್ಮ ಗೃಹ ಇಲಾಖೆಯವರು ಸಾಕಷ್ಟು

ಅಲರ್ಟ್ ಆಗಿದ್ದರೆ ಇದು ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಅಲ್ಲಿ ಆಗಿರುವ ಘಟನೆಗಳಿಂದ ಸಾಕಷ್ಟು ಅನಹುತಗಳಾಗಿದೆ. ಅಂಗಡಿಗಳಿಗೆ ಬೆಂಕಿ ಹಾಕಿದ್ದಾರೆಂದು ಗೊತ್ತಾಗಿದೆ. ಈಗ ಅಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿರುವುದರಿಂದ ಸ್ವಲ್ಪ ಸಮಾಧಾನವಾಗಿದೆಯೆಂದು ದೂರವಾಣಿ ಮಾಡಿ ವಿಚಾರಿಸಿದ್ದೇನೆ. ಗೃಹ ಸಚಿವರು ಮತ್ತು ಸಭಾನಾಯಕರು ಇಲ್ಲಿರುವುದರಿಂದ ಇಂಥ ದುರ್ಘಟನೆಗಳು ನಮ್ಮ ರಾಜ್ಯದಲ್ಲಿ ಆಗಬಾರದು ಎಂದು ಅವರ ಗಮನಕ್ಕೆ ತರಬಯಸುತ್ತೇನೆ. ಇದು ಹೊಸದಾಗಿ ಪ್ರಾರಂಭವಾಗುತ್ತಿದೆ. ದಯಮಾಡಿ ಅದು ಆಗದ ರೀತಿಯಲ್ಲಿ ನೋಡಿಕೊಳ್ಳುವಂಥ ಕ್ರಮವನ್ನು ಮಾನ್ಯ ಗೃಹ ಸಚಿವರು ಮತ್ತುಸಭಾನಾಯಕರು ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ

ಶ್ರೀ ಖಮರುಲ್ ಇಸ್ಲಾಂ :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಮತ್ತೊಬ್ಬ ಶಾಸಕರೂ ಸಹ ಹೇಳಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡಿ.

ಶ್ರೀ ಖಮರುಲ್ ಇಸ್ಲಾಂ :- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಶಿರಾದಲ್ಲಿ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ನಿನ್ನೆ ಸಾಕಷ್ಟು discussion ಆಗಿದೆ. ಆ discussion ಆದಮೇಲೆ ಎಲ್ಲಾ ಜನರಿಗೆ ಒಂದು confidence ಬಂತು. ಯಾವ ತರಹ ಈ procession ನಡೆಯುತ್ತಿದೆ, ಯಾವ ತರಹ ಈ ಕಾರ್ಯಕ್ರಮ ನಡೆಯುತ್ತಿದೆ? ಈ ಕಾರ್ಯಕ್ರಮ ಆದಮೇಲೆ ಈ processionನಲ್ಲಿ ಏಕೆ law and order situation ಬಂತು? ಎಂದು ತಮ್ಮ ಮುಖಾಂತರ ನಾನು Home Ministerರವರಿಗೆ ಕೇಳುತ್ತೇನೆ. ತಾವು ನಿನ್ನೆ ಈ ಸದನಕ್ಕೆ ಅದು ಒಳ್ಳೆಯ ಕಾರ್ಯಕ್ರಮವೆಂದು ಹೇಳಿದ್ದಿರಿ. ಬಹಳ ಒಳ್ಳೆಯದು, ಎಲ್ಲಾ ಜನ ಅದನ್ನು appreciate ಮಾಡುತ್ತಿದ್ದಾರೆಂದು ಹೇಳಿದಿರಿ. ಏಕೆಂದರೆ, ನಮ್ಮ opposition leaders ಹೇಳಿದ್ದಾರೆ. ಏನು ಇದೆ ಈ ಕಾರ್ಯಕ್ರಮದಲ್ಲಿ, ಏಕೆ ಈ situation ಆಗಿದೆ ಎಂದು ನೋಡಿ. Begainningನಿಂದ ಇದು ಒಂದು ಸಮಸ್ಯೆಯಾಗಿದೆ, ಇದು ಮುಂದೆ ಎರಡು ಸಮಸ್ಯೆ ಆಗಬಾರದು. Whatever thing is there, see that law and order is to be maintained. ಅದು ನಮ್ಮ priority, ನಮ್ಮ

ದೇಶದ priority, ನಮ್ಮ State priority. Law and order maintain ಮಾಡುವಾಗ ಏನು sacrifice ಮಾಡಬೇಕೋ, ಅದಕ್ಕೆ ನಾವೆಲ್ಲಾ ಜನ ರೆಡಿಯಿದ್ದೇವೆ. But, ಈ ತರಹ situation ಆಗಬಾರದೆಂದು ತಮ್ಮ ಮುಖಾಂತರ ನಾನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಡಾ॥ ಎ.ಎಸ್.ಆಚಾರ್ಯ [ಗೃಹ ಸಚಿವರು] :- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಇಬ್ಬರು ಸನ್ಮಾನ್ಯ ಸದಸ್ಯರು ಶಿರಾದಲ್ಲಿ ನಡೆದಿರತಕ್ಕಂಥ ಘಟನೆಯ ಬಗ್ಗೆ ಗಮನ ಸೆಳೆದಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಮಧ್ಯಾಹ್ನದಿಂದ ನಾನು ಇಲ್ಲೇ ಇದ್ದೇನೆ. ಅದರ ಬಗ್ಗೆ ಪೂರ್ತಿ ವಿವರಗಳನ್ನು ತಕ್ಷಣವೇ ತರಿಸುತ್ತೇನೆ. ಅತಿ ಶೀಘ್ರದಲ್ಲೇ ಸಭೆಯ ಮುಂದೆ ಆ ಬಗ್ಗೆ ಹೇಳಿಕೆಯೊಂದನ್ನು ನೀಡುತ್ತೇನೆ. ಇವತ್ತೇ ಆದರೆ ಇವತ್ತು ಅಥವಾ ನಾಳೆ early morning ಹೇಳಿಕೆ ಕೊಡುತ್ತೇನೆ. ಎಂತಹದ್ದೇ ಸಂದರ್ಭದಲ್ಲಿ situation escalate ಆಗದ ಹಾಗೆ, ಶಾಂತಿ restore ಮಾಡುವುದಕ್ಕೆ ಬೇಕಾದಂತಹ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು statement ಬೇಕಾದರೆ ನಾಳೆಯೇ ಮಾಡಿ. ನೀವು ಸವಿಸ್ತಾರವಾದಂತಹ ಮಾಹಿತಿಯನ್ನು ಫ್ಯಾಕ್ಸ್ ಮೂಲಕ ತರಿಸಿಕೊಂಡು ಹೇಳಿಕೆ ಕೊಡಿ. But, ತಕ್ಷಣ ಅಲ್ಲಿ 144 ಸೆಕ್ಷನ್ ಜಾರಿ ಮಾಡಿ, situation controlನಲ್ಲಿ ತೆಗೆದುಕೊಳ್ಳಬೇಕು. KSRPC ಅಥವಾ DR Police ಬೇಕಾದರೆ ಹಾಕಿ. ಒಟ್ಟಾರೆ ಹೆಚ್ಚಿನ force ಅನ್ನು ಅಕ್ಕಪಕ್ಕದ ಸ್ಥಳಗಳಿಂದ ಕಳುಹಿಸಿ ಆ situation ಅನ್ನು ತಿಳಿಗೊಳಿಸತಕ್ಕದ್ದನ್ನು ಮಾಡಬೇಕು. ಇಲ್ಲದಿದ್ದರೆ, anti-social elements ಇದರ advantage ತೆಗೆದುಕೊಂಡು ಗಲಾಟೆಯನ್ನು ಪುನ: ಎಲ್ಲಾ ಕಡೆಗೆ spread ಮಾಡುತ್ತಾರೆ. ದಯವಿಟ್ಟು ಮೊದಲು ಈ ಕೆಲಸ ಮಾಡಿ. Statement ಬೇಕಾದರೆ ಮುಂಜಾನೆ ಮಾಡಿ.

ಡಾ॥ ಎ.ಎಸ್.ಆಚಾರ್ಯ :- ಆಯಿತು, ಮಾಹಿತಿ ತರಿಸಿ ನಾಳೆ ಹೇಳಿಕೆ ಕೊಡುತ್ತೇನೆ.

ಅಧ್ಯಕ್ಷರು :- ಈಗ ಮಾನ್ಯ ಚಿಕ್ಕಣ್ಣನವರ ಗಮನ ಸೆಳೆಯುವ ಸೂಚನೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ.ಬಿ.ಸುರೇಶ್ ಬಾಬು :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮತ್ತೆ ಚರ್ಚೆ ಬೇಡ. ಈಗಾಗಲೇ ಎಲ್ಲವನ್ನೂ ಹೇಳಿದ್ದೀರಿ. ಮತ್ತೆ ಮಾನ್ಯ ಸಚಿವರು Statement ಮಾಡಿದಾಗ ಏನಾದರೂ ಇದ್ದರೆ ಕೇಳುವಿರಂತೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಪ್ರಸ್ತಾಪಿಸಿದರು. ತಾವೂ ಸಹ ಹೇಳಿದ್ದೀರಿ.

ಶ್ರೀ ಸಿ.ಬಿ.ಸುರೇಶ್ ಬಾಬು :- ಇದು ತುಂಬಾ ಸೂಕ್ಷ್ಮವಾದ ವಿಚಾರವಾಗಿದೆ. ಹಿಂದೆ ತಿಪಟೂರಿನಲ್ಲೂ ಈ ರೀತಿ ಆಗುತ್ತಿತ್ತು. ಈಗ ಶಿರಾದಲ್ಲಿ ಆಗುತ್ತಿದೆ. ಈ ಭಾಗದಲ್ಲಿ ಸುಮ್ಮನೆ ಗಲಾಟೆ ಆಗಬಾರದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ದಯಮಾಡಿ, ಇದರ ಬಗ್ಗೆ ಮುನ್ನೆಚ್ಚರಿಕೆಯನ್ನು ಗೃಹ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಶಿವಣ್ಣ :- ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :- ಮಾನ್ಯ ಶಿವಣ್ಣನವರೆ, ಅದರ ಬಗ್ಗೆ ಚರ್ಚೆ ಈಗ ಬೇಡ.

ಶ್ರೀ ಎಸ್.ಶಿವಣ್ಣ :- ಅವರು ಹೇಳುವುದು ಮಾಡುವುದು ಬೇಡ. ಯಾವುದನ್ನು ಯಾವುದಕ್ಕೋ ಹೋಲಿಸುತ್ತಾರೆ....

ಅಧ್ಯಕ್ಷರು :- ಆಯಿತು. ಈಗ ಮಾನ್ಯ ತನ್ವೀರ್ ಸೇಠ್‌ರವರು ಮಾನ್ಯ ಚಿಕ್ಕಣ್ಣನವರ ಪರವಾಗಿ ಗಮನ ಸೆಳೆಯಬೇಕೆಂದು ಕೋರುತ್ತೇನೆ.

(ಇ) ವಿಷಯ :- <u>2006-07ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರ ಆಡಳಿತ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ.</u>

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) (ಮಾನ್ಯ ಚಿಕ್ಕಣ್ಣನವರ ಪರವಾ) :- ಮಾನ್ಯ ಅಧ್ಯಕ್ಷರೆ, 2006-07ರ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರ ಆಡಳಿತ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.